# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **768/2015**

ಸಿ.ಡಬ್ಲ್ಯೂ- 10
ಪಿ.ಡಬ್ಲ್ಯೂ- 7

**ದಿನಾಂಕಃ 05-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಪ್ರಹ್ಲಾದ ಚೆನ್ನಗಿರಿ |
| ತಂದೆಯ/ಗಂಡನ ಹೆಸರು | : ರಾಮಪ್ಪ |
| ವಯಸ್ಸು | : 39 ವರ್ಷ |
| ಉದ್ಯೋಗ | : ಪಿ. ಐ. ಡಿ.ಸಿ.ಆರ್.ಇ. ಬೆಳಗಾವಿ |
| ವಾಸ ಸ್ಥಳ | : ಬೆಳಗಾವಿ |
| ತಾಲೂಕು | : ಬೆಳಗಾವಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ-**

ನಾನು ದಿಃ 24-10-2014 ರಿಂದ ದಿಃ 15-07-2016 ರವರೆಗೆ ಮೂಡಲಗಿ ಪೊ. ಠಾಣೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 24-10-2014 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 9 ರವರಿಂದ ಪಡೆದುಕೊಂಡಿರುತ್ತೆನೆ. ದಿಃ 17.11.2014 ರಂದು ತಹಶೀಲ್ದಾರ ಗೋಕಾಕ ಇವರಿಂದ ಸರ್ವೆ ನಂ. 376/9 ಜಮೀನಿಗೆ ಸಂಬಂಧಿಸಿದ ಮ್ಯುಟೇಶನ ಎಂಟ್ರಿ ಪ್ರತಿಯನ್ನು ಮತ್ತು ಹಕ್ಕು ದಾಖಲೆಗಳ ಪ್ರತಿ 8841 ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಗಳನ್ನು ಈಗಾಗಲೇ ನಿಪಿ-13 ಮತ್ತು ನಿಪಿ-14 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ದಿಃ 19.03.2015 ರಂದು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮರಣ ಹೊಂದಿದ ಯಲ್ಲಪ್ಪ ರಾಮಪ್ಪ ಕಳಸನ್ನವರ, ಸದಾಶಿವ ರಾಮಪ್ಪ ಕಳಸನ್ನವರ ಮತ್ತು ನಾಗಪ್ಪ ರಾಮಪ್ಪ ಕಳಸನ್ನವರ ಇವರ ಮರಣ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಗಳನ್ನು ಈಗಾಗಲೇ ನಿಪಿ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ದಿಃ 27.03.2015 ರಂದು ಮೃತ ಗಂಗಪ್ಪ ರಾಮಪ್ಪ ಕಳಸನ್ನವರ ಮರಣ ಪ್ರಮಾಣ ಪತ್ರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿರುತ್ತದೆ. ದಿಃ 12.08.2015 ರಂದು ಸಬ್ ರೆಜಿಸ್ಟರ ಗೋಕಾಕ ಇವರಿಂದ ಸರ್ವೇ ನಂ. 376/9 ಜಮೀನು ಖರೀದಿ ನೊಂದಣಿ ಸಮಯದಲ್ಲಿ ಹಾಜರುಪಡಿಸಿದ ಗುರುತಿನ ಚೀಟಿಗಳನ್ನು ಪೂರೈಸುವಂತೆ ಕೇಳಿದ್ದು, ಅದೇ ದಿನ ಸಬ್ ರೆಜಿಸ್ಟರ ಗೋಕಾಕ ನನಗೆ ಪತ್ರ ವ್ಯವಹಾರ ಮಾಡಿದ್ದು ಅದನ್ನು ಸ್ವೀಕೃರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲಾತಿಯನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು.

ಸಿ.ಸಿ. ನಂಃ **768/2015**
ಸಿ.ಡಬ್ಲ್ಯೂ- 10
ಪಿ.ಡಬ್ಲ್ಯೂ- 7

ನಂತರ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿದ್ದು, ಆರೋಪ ಸಾಭೀತಾದ ಹಿನ್ನೆಲೆಯಲ್ಲಿ ಮಾನ್ಯ ನ್ಯಾಯಾಲಯಕ್ಕೆ ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ LBW ವಕೀಲರಿಂದಃ</u>**

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಪಿ-1 ಮೇಲಿರುವ ಸಹಿ 2 ನೇ ಆರೋಪಿಗೆ ಸೇರಿದ್ದು ಎಂದು ಖಚಿತಪಡಿಸಿಕೊಳ್ಳಲು ನನ್ನ ತನಿಖಾ ಅವಧಿಯಲ್ಲಿ ನಿಪಿ-1 ನ್ನು ಮತ್ತು 2 ನೇ ಆರೋಪಿಯ ಮಾದರಿ ಸಹಿಗಳನ್ನು ಸಂಗ್ರಹಿಸಿ FSL ವರದಿಗೆ ಕಳುಹಿಸಿಕೊಟ್ಟಿರುವುದಿಲ್ಲ, ಹಾಗೆ ಕಳುಹಿಸಿಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾನು ತಹಶೀಲ್ದಾರ ಗೋಕಾಕ ಇವರಿಂದ ಸರ್ವೇ ನಂ. 376/9 ಜಮೀನಿಗೆ ಸಂಬಂಧಿಸಿದ ನಿಪಿ-13 ಮತ್ತು 14 ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಪಿ-4 ರಿಂದ 7 ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿಲ್ಲದಿದ್ದರೂ ಸಹ ಚಾಸಾ 1 ರವರ ಮಾತು ಕೇಳಿಕೊಂಡು ಆರೋಪಿತರ ವಿರುದ್ಧ ಮಾನ್ಯ ನ್ಯಾ. ಕ್ಕೆ ಸುಳ್ಳು ದೋ ಪಟ್ಟಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.